**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 7168 / 2022**

**ಚಾಸಾ ಃ- 02 / ಪ್ರಾಸಾ ಃ- 04**

| | |
|---|---|
| ಹೆಸರು | ಕುಮಾರ್ |
| ತಂದೆ ಹೆಸರು | ಚನ್ನಪ್ಪ |
| ವಯಸ್ಸು | 55 |
| ಉದ್ಯೋಗ | ವ್ಯವಸಾಯ |
| ವಿಳಾಸ | ಜುಟ್ಟನಹಳ್ಳಿ |

**ದಿನಾಂಕಃ 18.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸ 1 , ಚಾಸಾ 3 ಮತ್ತು 4 ರವರು ಪರಿಚಯ ಇರುತ್ತಾರೆ. ಚಾಸಾ 1, 3 ಮತ್ತು 4 ರವರು ನನ್ನ ಗ್ರಾಮದವರು. ಆರೋಪಿಗಳು ಸಹ ಪರಿಚಯ ಇರುತ್ತಾರೆ. ದಿನಾಂಕ 28.08.2022 ರಂದು ಮಧ್ಯಹ್ನ 2.00 ಗಂಟೆ ಸಮಯದಲ್ಲಿ ನಾನು ಹೊಲದ ಕಡೆಯಿಂದ ಬರುತ್ತಿದ್ದೆನು ಆಗ ಆರೋಪಿಗಳು ಮತ್ತು ಚಾಸಾ 1, 3 ಮತ್ತು 4 ರವರು ಜಗಳ ಮಾಡಿಕೊಳ್ಳುತ್ತಿದಿದ್ದರು. ಆರೋಪಿಗಳು ಚಾಸಾ 1 ಮತ್ತು 4 ರವರಿಗೆ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡುತ್ತಿದ್ದರು. ಸದರಿ ದೊಣ್ಣೆ ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಮತ್ತು 2 ಅನ್ನು ತೋರಿಸಲಾಗಿ ಸದರಿ ದೊಣ್ಣೆ ಮತ್ತು ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ**

ಃ-

ದಿನಾಂಕ 28.08.2022 ರಂದು ಮಧ್ಯಹ್ನ 2.30 ಗಂಟೆ ಸಮಯದಲ್ಲಿ ಶಿವಣ್ಣರವರ ಜಮೀನಿನ ಬಳಿ ಗಲಾಟೆ ಆಗುತ್ತಿದ್ದು ಹತ್ತಿರ ಹೋಗಿ ನೋಡಲಾಗಿ ನಿಮ್ಮ ಗ್ರಾಮದ ಮಕ್ಕಳಾದ ಸಿದ್ದಲಿಂಗಯ್ಯ ಮತ್ತು ಶಿವಣ್ಣ ರವರು ಏಕಾಏಕಿ ಶಿವಣ್ಣರವರ ಜಮೀನಾದ ಜುಟ್ಟನಹಳ್ಳಿ ಗ್ರಾಮದ ಸರ್ವೆ ನಂ.92/2 ರಲ್ಲಿನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಏಕಾ ಏಕಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಸರ್ವೆ ನಂ.92/4 ರಲ್ಲಿ 2 ಗುಂಟೆ ಜಮೀನನ್ನು ಯಾವುದೇ ಅಳತೆ ಮಾಡದೆ ನಮ್ಮ ಜಮೀನಿಗೆ ಕಲ್ಲು ಕೂಚಗಳನ್ನು ಏಕೆ ನೆಟ್ಟಿರುತ್ತೀರಿ ಎಂದು ಕಲ್ಲು ಕೂಚಗಳನ್ನು ಕಿತ್ತು ಹೊಡೆದು ಹಾಕಿ ನಷ್ಟವನ್ನುಂಟುಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಕೇಳಲು ಹೋದ ಚಾಸಾ 1 ರವರಿಗೆ ಆರೋಪಿಗಳು ತುಟಿಯ ಮೆ ೀಲೆ ಹಾಗೂ ಮುಗಿನ ಮೇಲೆ ಹೊಡೆದು ನಂತರ 1 ನೇ ಆರೋಪಿಯು ದೊಣ್ಣೆಯಿಂದ ಮತ್ತು 2 ನೇ ಅರೋಪಿಯು ಕಲ್ಲಿನಿಂದ ಚಾಸಾ 1 ರವರ ಮೈ ಮೇಲೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಂತರ ನೀವು, ಚಾಸ 3 ಮತ್ತು 4 ರವರು ಹೋಗಿ ಜಗಳವನ್ನು ಬಿಡಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವಾಗಿ ನೀವು ದಿನಾಕ 31.08.2022 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಸಮಯಾವಕಾಶ ಕೋರಿದ್ದು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 7168 / 2022**

**ಚಾಸಾ ಃ- 03 / ಪ್ರಾಸಾ ಃ- 03**

| | |
|---|---|
| ಹೆಸರು | ಸರೋಜಮ್ಮ |
| ಗಂಡನ ಹೆಸರು | ಚಂದ್ರಪ್ಪ |
| ವಯಸ್ಸು | 48 |
| ಉದ್ಯೋಗ | ವ್ಯವಸಾಯ |
| ವಿಳಾಸ | ಜುಟ್ಟನಹಳ್ಳಿ |

**ದಿನಾಂಕಃ 18.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸ 1 ರವರು ಪರಿಚಯ ಇರುತ್ತಾರೆ. ಚಾಸಾ 2 ಮತ್ತು 4 ರವರು ಪರಿಚಯ ಇರುತ್ತಾರೆ. ಆರೋಪಿಗಳು ಸಹ ಪರಿಚಯ ಇರುತ್ತಾರೆ. ದಿನಾಂಕ 28.08.2022 ರಂದು ಚಾಸಾ 1 ರವರು ಕಲ್ಲುಕುಚ್ಚವನ್ನು ನೆಡುತ್ತಿದ್ದರು ಆಗ ಆರೋಪಿಗಳು ಬಂದು ಗಲಾಟೆ ಮಾಡಿ ಚಾಸಾ 1 ರವರಿಗೆ ಹಲ್ಲೆ ಮಾಾಡುತ್ತಿದ್ದರು ಆಗ ನಾನು, ಚಾಸ 2 ಮತ್ತು 4 ರವರು ಹೋಗಿ ಬಿಡಿಸಿರುತ್ತೇವೆ. ಆರೋಪಿಗಳು ಚಾಸಾ 1 ರವರಿಗೆ ದೊಣ್ಣೆ ಮತ್ತು ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ಸದರಿ ದೊಣ್ಣೆ ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಮತ್ತು 2 ಅನ್ನು ತೋರಿಸಲಾಗಿ ಸದರಿ ದೊಣ್ಣೆ ಮತ್ತು ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ**

ಃ-

ನಿಮ್ಮ ಮಾವನವರಾದ ಲೇಟ್ ಶಿವಣ್ಣ ರವರ ಹೆಸರಿನಲ್ಲಿ ಮಾಗಡಿ ತಾಲ್ಲೂಕು ಕಸಬಾ ಹೋಬಳಿ ಜುಟ್ಟನಹಳ್ಳಿ ಗ್ರಾಮದ ಸರ್ವೆ ನಂ.92/2 ರಲ್ಲಿ 2 ಎಕರೆ 23 ಗುಂಟೆ ಜಮೀನು ಇದ್ದು ನೀವೆ ಸ್ವಾಧೀನಾನುಭವದಲ್ಲಿ ಇರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಜಮೀನಿಗೆ ಹೊಂದಿಕೊಂಡಂತೆ ಗುರುಸಿದ್ದಮ್ಮ ರವರ ಹೆಸರಿನಲ್ಲಿ ಜುಟ್ಟನಹಳ್ಳಿ ಗ್ರಾಮದ ಸರ್ವೆ ನಂ .92/4 ರಲ್ಲಿ 2 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 28.08.2022 ರಂದು ನೀವುಗಳು ಸುತ್ತಲೂ ಕಲ್ಲುಕೂಚ್ಛಗಗಳನ್ನು ನೆಡುತ್ತಿದ್ದಾಗ ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಗುರುಸಿದ್ದಮ್ಮ ರವರ ಮಕ್ಕವಾದ ಆರೋಪಿಗಳು ಏಕಾ ಏಕಿ ನಿಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಬಳಿ ಬಂದು ನೀವುಗಳು ಅಳತೆ ಮಾಡದೆ ನಮ್ಮ ಜಮೀನಿಗೆ ಕಲ್ಲು ಕೂಚಗಳನ್ನು ಏಕೆ ನೆಟ್ಟಿರುತ್ತೀರಿ ಎಂದು ಕಲ್ಲು ಕೂಚಗಳನ್ನು ಕಿತ್ತು ಹೊಡೆದು ಹಾಕಿ ನಷ್ಟವನ್ನುಂಟು ಮಾಡಿರುತ್ತರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೇಳಲು ಹೊದ ಚಾಸಾ 1 ರವರಿಗೆ ಆರೋಪಿಗಳು ತುಟಿಯ ಮೇಲೆ ಹಾಗೂ ಮುಗಿನ ಮೇಲೆ ಹೊಡೆದು ನಂತರ 4 ನೇ ಆರೋಪಿಯು ದೊಣ್ಣೆಯಿಂದ ಮತ್ತು 2ನೇ ಅರೋಪಿಯು ಕಲ್ಲಿನಿಂದ ಮೈ ಮೇಲೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರವಾಗಿ ನೀವು ದಿನಾಂಕ 23.09/2022 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಸಮಯಾವಕಾಶ ಕೋರಿದ್ದು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 7168 / 2022**

**ಚಾಸಾ ಃ- 03 / ಪ್ರಾಸಾ ಃ- 03**

**ದಿನಾಂಕಃ 18.07.2025 ರಂದು** ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್ ವಕೀಲರಿಂದ ಆರೋಪಿಗಳ ಪರವಾಗಿ ಃ-**

ಚಾಸಾ 1 ರವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ಮೈದುನ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಗಳ ನಡುವೆ ಸುಮಾರು ಎಷ್ಟು ವರ್ಷಗಳಿಂದ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ 15-20 ವರ್ಷಗಳಿಂದ ಎಂದು ನುಡಿಯುತ್ತಾರೆ. ನಿಮ್ಮ ಮಾವ ಮತ್ತು ಆರೋಪಿಗಳ ತಂದೆ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಜಮೀನಿನ ಭಾಗದ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜಮೀನಿನ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಗೊತ್ತಿದೆಯೆ ಎಂದರೆ ಸಾಕ್ಷಿ ಹೌದು ಸರ್ವೆ ನಂ.92/2 ಇದ್ದು ವಿಸ್ತೀರ್ಣ 2 ಎಕರೆ 23 ಗುಂಟೆ ಎಂದು ನುಡಿಯುತ್ತಾರೆ. ಸದರಿ ಜಮೀನು ನಿಮ್ಮ ಮತ್ತು ಆರೋಪಿಗಳ ಕುಟುಂಬಕ್ಕೆ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಗಳ ಹೆಸರು ಪಹಣಿಯಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಕುಟುಂಬದಲ್ಲಿ ಭಾಗ ಆದ ಬಗ್ಗೆ ಪೋಲಿಸರಿಗೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಘಟನೆಯ ವಿಚಾರವನ್ನು ಈ ದಿನ ನ್ಯಾಯಲಯದಲ್ಲಿ ಅಲ್ಲದೆ ಬೇರೆ ಎಲ್ಲಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಸಂಬಂಧ ನೀವು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆದಾಗ ಬೇರೆ ಊರಿನ ಜನ ಸೇರಿದ್ದರ ಎಂದರೆ ಸಾಕ್ಷಿ ಯಾರೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಮತ್ತು 2ಅನ್ನು ಪೋಲಿಸರಿಗೆ ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆರೋಪಿಗಳು ಹೊಡೆದಿದ್ದಾಗ ಅವು ಅಲ್ಲೆ ಇದ್ದವು ಪೋಲಿಸರು ತೆಗೆದುಕೊಂಡು ಬಂದಿರುತ್ತಾರೆ ಎಂದು ನುಡಿಯತ್ತಾರೆ. ಯಾವುದೇ ಗಲಾಟೆ ನಡೆಯದೆ ಇದ್ದರೂ ಜಮೀನಿನ ಮನಸ್ತಾಪ ಇರುವುದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಮತ್ತು 2 ಅನ್ನು ನೀವೆ ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.** **ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 7168 / 2022**

**ಚಾಸಾ ಃ- 02 / ಪ್ರಾಸಾ ಃ- 04**

**ದಿನಾಂಕಃ 18.07.2025 ರಂದು** ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್ ವಕೀಲರಿಂದ ಆರೋಪಿಗಳ ಪರವಾಗಿ ಃ-**

ನಿಮ್ಮ ಮತ್ತು ಆರೋಪಿಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವನ್ನು ಇದೇ ಮೊದಲಭಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗಲಾಟೆ ಆಗಿರುತ್ತದೆ ಎಂದು ಹೇಳಿದ್ದು ಗ್ರಾಮಸ್ಥರು ಯಾರು ಇದ್ದರು ಎಂದರೆ ಸಾಕ್ಷಿ ಗ್ರಾಮಸ್ಥರು ಯಾರೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ 1ರವರ ಬಟ್ಟೆಗೆ ರಕ್ತದ ಕಲೆಗಳು ಆಗಿದ್ದವ ಎಂದರೆ ಸಾಕ್ಷಿ ಆಗ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಮತ್ತು ಚಾಸಾ 1 ರವರ ನಡುವೆ ಜಮೀನಿನ ವಿಚಾರವಾಗಿ ಮನಸ್ತಾಪ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೇಮಾಲು 1 ಮತ್ತು 2 ಯಾವ ರೀತಿ ನ್ಯಾಯಾಲಯಕ್ಕೆ ಬಂದಿರುತ್ತದೆ ಎಂದು ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 2 ದೊಣ್ಣೆ ಇರುವುದಿಲ್ಲ ಯಾವುದೇ ಗಿಡದ ಬುಡ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಗಳ ನಡುವೆ ಮಾತುಕತೆ ಇರದ ಕಾರಣ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಯಾವ ಸರ್ವೆ ನಂಬರ್ ನ ಜಮೀನಿಗೆ ಕಲ್ಲುಕೂಚ್ಚ ಹಾಕಿದ್ದರು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಕಲ್ಲುಕೂಚಗಳನ್ನು ಹೊಡೆದು ಹಾಕಿರುವುದಿಲ್ಲ ಮತ್ತು

ನಷ್ಟ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ಆರೋಪಿಗಳು ಚಾಸಾ 1 ರವರಿಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**